**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:02–06–2015 ರ ನಡವಳಿಗಳು**

**ವಿಷಯದ ಸಂಖ್ಯೆ : 62 / 2015–16**

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಸೂಲಿಯಾಗುತ್ತಿರುವ ಕಂದಾಯದಲ್ಲಿ ವಸೂಲಾಗುವ ಗ್ರಂಥಾಲಯ ಕರ ಹಾಗೂ ಭಿಕ್ಷುಕ ಕರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಖಾತೆಯನ್ನು ತೆರೆಯುವ ಬಗ್ಗೆ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಸೂಲಿ ಆಗುತ್ತಿರುವ ಕಂದಾಯದಲ್ಲಿ ಶೇ.6 ರಷ್ಟು ಗ್ರಂಥಾಲಯ ಕರ ಹಾಗೂ ಶೇ.3 ರಷ್ಟು ಬಿಕ್ಷುಕ ಕರ ಒಳಗೊಂಡಿರುತ್ತದೆ. ಈ ರೀತಿ ವಸೂಲಾಗುತ್ತಿರುವ ಗ್ರಂಥಾಲಯ ಕರ ಹಾಗೂ ಭಿಕ್ಷುಕ ಕರವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿಸಬೇಕಾಗಿರುತ್ತದೆ. ಈ ಸಂಬಂಧ ಪಾಲಿಕೆಯ ಆಸ್ತಿ ತೆರಿಗೆಯೊಂದಿಗೆ ವಸೂಲಾದ ಗ್ರಂಥಾಲಯ ಕರ ಹಾಗೂ ಭಿಕ್ಷುಕ ಕರವನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸಬೇಕಾಗಿರುವ ಹಿನ್ನಲೆಯಲ್ಲಿ ದಿನಾಂಕ:01–04–2015 ರಿಂದ ವಸೂಲಾಗಿರುವ ಕಂದಾಯದಲ್ಲಿನ ಗ್ರಂಥಾಲಯ ಕರ ಹಾಗೂ ಭಿಕ್ಷುಕ ಕರವನ್ನು ಪ್ರತ್ಯೇಕವಾಗಿ ನಿರ್ವಹಿಸಲು ಮಾನ್ಯ ಆಯುಕ್ತರು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳ ಹೆಸರಿನಲ್ಲಿ ಒಂದು ಜಂಟಿ ಖಾತೆಯನ್ನು ತೆರೆಯುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18–05–2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು